ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾ ಇದನ್ನು ಸಪರೇಟ್ ಮಾಡುತ್ತೇವೆ ವಿಭಾಗವಾಗಿ ಮಾಡುತ್ತಿದ್ದೇವೆಂದು ಹೇಳಿದ್ದರು. ಇದರ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಭೀಮಣ್ಣ ಖಂಡ್ರೆ : ಆದನ್ನು ಇನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಬೈರೇಗೌಡ : ಹೆಚ್ಚು ಹಣ ಕೊಟ್ಟಿರುವುದರಿಂದ ಸುಮಾರು 79 ಕೋಟಿ ರೂಪಾಯಿ ಹಣ ನಷ್ಟ ಆಗುವುದಕ್ಕೆ ಕಾರಣ ಆಗಿಲ್ಲವೆ? ನಿಮ್ಮ ರಿಜನಲ್ ವರ್ಕ ಷಾಪಿನಲ್ಲಿ ಬಾಡಿ ಬಿಲ್ಡ್ ಮಾಡಿದ್ದರೆ ಎಷ್ಟು ಆಗುತ್ತಿತ್ತು? ಹೊರಗಡೆ ಎಷ್ಟು ಕೊಡುತ್ತಿದ್ದೀರಿ?

ಶ್ರೀ ಭೀಮಣ್ಣ ಖಂಡ್ರೆ : ನಿಮಗೆ ಸ್ಯಾಟಿಸ್ ಫೈ ಆಗದಿದ್ದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ನಿಮಗೆ ಸ್ಯಾಟಿಸ್ ಫೈ ಆಗುವಂತೆ ಉತ್ತರ ಕೊಟ್ಟಿದ್ದೇನೆ ಎಂದು ಅಂದುಕೊಂಡು ಕೊಟ್ಟಿದ್ದೇನೆ. ನೀವು ಏನು ಕೇಳಿದ್ದೀರಿ ಅದಕ್ಕೆ ಉತ್ತರ ಕೊಟ್ಟಿದ್ದೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಸಾರ್ವಜನಿಕ ಸಾರಿಗೆ ಖಾಸಗೀಕರಣ

480 - ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗಶಃ ಖಾಸಗೀಕರಣದ ತೀರ್ಮಾನವನ್ನು ಸರ್ಕಾರವು ಕೈಗೊಂಡಿದೆಯೇ?

ಆ) ಪರ್ಯಾಯವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಅನ್ವಯಿಸುವಂತೆ ಖಾಸಗಿ ಕ್ಷೇತ್ರದ ಸೇವಾ ನಿಯಮಗಳನ್ನು ಅಳವಡಿಸುವ ಆಲೋಚನೆ ಸರ್ಕಾರಕ್ಕೆ ಇದೆಯೆನ್ನುವುದು ನಿಜವೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಚನ್ನಪಟ್ಟಣದಲ್ಲಿ ಬಸ್ ನಿಲ್ದಾಣ ಹಾಗೂ ತಂಗು ದಾಣಗಳನ್ನು ನಿರ್ಮಾಣ

1072 - ಶ್ರೀ ಸಾದತ್ ಅಲಿಖಾನ್ (ಚೆನ್ನಪಟ್ಟಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ಟೌನ್ ನಲ್ಲಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಕ.ರಾ.ರ.ಸಾ. ಸಂಸ್ಥೆಯ ಆಧುನಿಕ ಬಸ್ ನಿಲ್ದಾಣವನ್ನು ನಿರ್ಮಿಸಬೇಕಾಗಿರುವುದು ನಿಜವೇ?

ಆ) ಬಸ್ ನಿಲ್ದಾಣ ಕಟ್ಟಡ ನಿರ್ಮಾಣದ ಅಂದಾಜಿನ ಒಟ್ಟು ಮೊತ್ತವೆಷ್ಟು?

ಇ) ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ) ಕಳೆದ ಎರಡು ವರ್ಷಗಳಿಂದ ಚನ್ನಪಟ್ಟಣದ ಸಿ.ಎಸ್.ಎಸ್. ಮಿಲ್ ಮತ್ತು ಮಹಾದೇವಿ ಚೌಕದ ಬಳಿ ಎರಡು ಬಸ್ ತಂಗುದಾಣಗಳ ಕಟ್ಟಡ ಕೆಲಸಗಳನ್ನು ಕೈಗೆತ್ತಿ ಕೊಳ್ಳದಿರುವುದು ನಿಜವೇ?

ಉ) ಇದುವರೆವಿಗೂ ಕಟ್ಟಡದ ಕೆಲಸಗಳನ್ನು ಕೈಗೆತ್ತಿಕೊಳ್ಳದಿರಲು ಕಾರಣಗಳು

ಊ) ಇವುಗಳನ್ನು ಯಾವಾಗ ನಿರ್ಮಿಸಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಅಂದಾಜುಗಳನ್ನು ಇನ್ನು ತಯಾರು ಮಾಡಬೇಕಾಗಿದೆ.

ಇ) ಅಂದಾಜುಗಳನ್ನು ಪೂರ್ಣಗೊಳಿಸಿದ ನಂತರ.

ಈ) ಹೌದು

ಉ) ಬೇಕಾಗಿದ್ದ ಭೂಮಿಯ ಕ.ರಾ.ರ.ಸಾ. ಸಂಸ್ಥೆಯ ಒಡೆತನದಲ್ಲಿರಲಿಲ್ಲ. ಚೆನ್ನಪಟ್ಟಣ ಪುರಸಭೆಯು ದಿನಾಂಕ : 16-4-1992ರಂದು ಬೇಕಾಗಿರುವ ಭೂಮಿಯನ್ನು ಒದಗಿಸಿದೆ.

ಊ) ಜನವರಿ 93ರಿಂದ ಕೆಲಸವನ್ನು ಪ್ರಾರಂಭಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷೀಣೆಯವರೇ 8ನೇ ಪಟ್ಟಿಯಲ್ಲಿರುವ 46 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 85, 482, 834, 549, 6, 837, 836, ಮತ್ತು 1071 ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನುಳಿದ 40 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಕ್ಷಿಣ ಕನ್ನಡದ ಸಹಕಾರಿ ಅಕ್ಕಿ ಗಿರಣಿಗಳಿಗೆ ಭತ್ತ ಪೂರೈಕೆ

84 - ಶ್ರೀ ಜಿ.ಎನ್. ಆಚಾರ್ (ಬೈಂದೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ದಕ್ಷಿಣ ಕನ್ನಡ ಜಿಲ್ಲೆಗೆ ಪ್ರತಿ ವರ್ಷ ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಗ್ರಾಹಕರಿಗೆ ವಿತರಿಸಲು ಹೊರ ಜಿಲ್ಲೆಗಳಿಂದ ಎಷ್ಟು ಪ್ರಮಾಣದ ಅಕ್ಕಿಯನ್ನು ಕರ್ನಾಟಕ ಆಹಾರ ಮತ್ತು ನಗರೀಕ ಸರಬರಾಜು ನಿಗಮ ಒದಗಿಸುತ್ತದೆ?

2) ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳ ನೆರವು ನೀಡಿ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರಿ ಮಾರಾಟ ಸಂಘಗಳಲ್ಲಿ ಅಕ್ಕಿ ಗಿರಣಿ ಸ್ಥಾಪಿಸಿದ್ದು, ಅಲ್ಲಿ ಭತ್ತವಿಲ್ಲದೆ ಕೆಲಸ ಕುಂಠಿತವಾಗಿದ್ದು ಸರ್ಕಾರದ ಗಮನಕ್ಕೆ ಬಂದಿರುವುದೇ?